# ಸ್ಥಳೀಯಾಡಳಿತ ಸಂಸ್ಥೆಗಳು ಸ್ವಯಂ ಸರ್ಕಾರಗಳಾಗಿ ಕಾರ್ಯನಿರ್ವಹಿಸಲು ಪೂರಕವಾಗಿರಬೇಕಾದ ರಾಜಕೀಯ ಪಕ್ಷಗಳ ಚುನಾವಣಾ ಪ್ರಣಾಳಿಕೆಯ ಅಂಶಗಳು

ಸಲ್ಲಿಕೆ: ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ, ಕರ್ನಾಟಕ
ಕಾರ್ಯಾಲಯ: ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್

- ತಾಲೂಕು, ಜಿಲ್ಲಾ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಹಾಗೂ ಆಡಳಿತ ವ್ಯವಸ್ಥೆಗಳು ಗ್ರಾಮ ಪಂಚಾಯತಿಯನ್ನು ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಅಧೀನ ಇಲಾಖೆ ಎಂದು ಪರಿಗಣಿಸದೇ, ಸಂವಿಧಾನ ಮತ್ತು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ ಚೌಕಟ್ಟಿನಲ್ಲಿರುವಂತೆ ಕರ್ತವ್ಯ ಮತ್ತು ಹೊಣೆಗಳನ್ನು ನಿರ್ವಹಿಸುವ ಸ್ವಾಯತ್ತ ಸ್ಥಳೀಯ ಸರ್ಕಾರ ಎಂದು ಪರಿಗಣಿಸಬೇಕು.
- ಪಂಚಾಯತ್‌ರಾಜ್ ಅಧಿನಿಯಮದಲ್ಲಿ ಗ್ರಾಮಪಂಚಾಯಿತಿಯ ನಿಗಧಿಗೊಳಿಸಿದ ಅಧಿಕಾರ ಮತ್ತು ಹೊಣೆಗಾರಿಕೆಗಳನ್ನು ಗ್ರಾಮ ಪಂಚಾಯತಿಯು ಸ್ವತಂತ್ರವಾಗಿ ನಿರ್ವಹಿಸಲು ಸಾಧ್ಯವಾಗುವಂತೆ ಅದರ ಅಧೀನ ಬರುವ ಎಲ್ಲ ಇಲಾಖೆಗಳ ಹಣಕಾಸು, ಪ್ರಕಾರ್ಯ ಮತ್ತು ಸಿಬ್ಬಂದಿಯನ್ನು ಗ್ರಾಮ ಪಂಚಾಯಿತಿಯ ಅಧೀನಕ್ಕೆ ನೀಡಬೇಕು.
- ಪಂಚಾಯತ್‌ರಾಜ್ ಅಧಿನಿಯಮದ ಅನ್ವಯ ಗ್ರಾಮ ಪಂಚಾಯಿತಿಗೆ ನೀಡುವ ಶಾಸನಬದ್ಧ ಅನುದಾನ, ವಿಶೇಷ ಅನುದಾನ, ವಿವೇಚನಾ ಅನುದಾನ, ಕೇಂದ್ರ ಮತ್ತು ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಗ್ರಾಮ ಪಂಚಾಯಿತಿಗೆ ನೀಡುವಎಲ್ಲ ಅನುದಾನಗಳು ಮುಕ್ತ ಅನುದಾನಗಳಾಗಿರಬೇಕು. ಅವುಗಳನ್ನು ಆಧರಿಸಿ ಮಾಡುವ ಯೋಜನೆ ಮತ್ತು ವೆಚ್ಚಗಳಿಗೆ ಯಾವುದೇ ನಿರ್ಬಂಧ ವಿಧಿಸಬಾರದು.
- ಗ್ರಾಮ ಪಂಚಾಯಿತಿಯ ವಾರ್ಷಿಕ ಅಂದಾಜು ಆಯವ್ಯಯ ಪತ್ರವುಗ್ರಾಮ ಸಭೆಯ ಮಂಜೂರಾತಿಗೆ ಒಳಪಟ್ಟಿರಬೇಕು. ಅದರ ವಾರ್ಷಿಕ ಮತ್ತು ಮುನ್ನೋಟ ಯೋಜನೆ ರೂಪಿಸುವ, ಅಂತಿಮಗೊಳಿಸುವ ಮತ್ತು ಅನುಮೋದಿಸುವ ಅಧಿಕಾರ ಗ್ರಾಮ ಸಭೆಯದ್ದಾಗಿರಬೇಕು. ತಾಲೂಕು, ಜಿಲ್ಲಾ, ರಾಜ್ಯ ಮತ್ತು ಕೇಂದ್ರ ಸರ್ಕಾರದ ಯೋಜನೆಗಳು ಮತ್ತು ವಾರ್ಷಿಕ ಅಂದಾಜು ಆಯವ್ಯಯ ಪತ್ರಗಳು ಕಡ್ಡಾಯವಾಗಿ ಗ್ರಾಮಸಭೆ ಅಂತಿಮಗೊಳಿಸಿದ ಯೋಜನೆಗೆ ಮತ್ತು ವಾರ್ಷಿಕ ಅಂದಾಜು ಆಯವ್ಯಯ ಪತ್ರಕ್ಕೆ ಅನುಗುಣವಾಗಿರಬೇಕು. ಈ ಆಧಾರದ ಮೇಲೆ ಹಂಚಿಕೆಯಾಗುವ ಅನುದಾನಗಳು ನೇರವಾಗಿ ಗ್ರಾಮ ಪಂಚಾಯತ್‌ಗಳಿಗೆ ವರ್ಗಾವಣೆಯಾಗಬೇಕು.
- ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಕ್ಕಳು, ಮಹಿಳೆಯರು ಸೇರಿದಂತೆ ಬದಿಗೊತ್ತಲ್ಪಟ್ಟ ವರ್ಗದ ರಕ್ಷಣೆಯ ವ್ಯವಸ್ಥೆ, ಹೊಣೆಗಾರಿಕೆ ಪಂಚಾಯಿತಿಯದ್ದಾಗಿರಬೇಕು. ಅದಕ್ಕೆ ಸಂಬಂಧಪಟ್ಟಂತೆ ಕಾನೂನು ಕ್ರಮಗಳನ್ನು ತೆಗೆದುಕೊಳ್ಳುವ ಅಧಿಕಾರವು ಅದರದ್ದೆ ಆಗಿರಬೇಕು. ಇದಕ್ಕೆ ಪ್ರತ್ಯೇಕವಾದ ಅಥವಾ ಸಮಾನಾಂತರ ವ್ಯವಸ್ಥೆಗೆ ಅವಕಾಶ ಇರಬಾರದು.
- ಪಂಚಾಯಿತಿ ಸದಸ್ಯರ, ಸಿಬ್ಬಂದಿಗಳ ಮತ್ತು ಸ್ಥಾಯಿ ಹಾಗೂ ಉಪಸಮಿತಿಗಳ ಸದಸ್ಯರ ಸಾಮರ್ಥ್ಯಾಭಿವೃದ್ಧಿ ಮತ್ತು ಸಬಲೀಕರಣ ಕಾರ್ಯಕ್ರಮಗಳನ್ನು ಆಯೋಜಿಸುವ ಹೊಣೆಗ್ರಾಮ ಪಂಚಾಯಿತಿಯದ್ದಾಗಿರಬೇಕು. ಇದಕ್ಕೆ ಪ್ರತ್ಯೇಕವಾದ ಅಥವಾ ಸಮಾನಾಂತರ ವ್ಯವಸ್ಥೆಗೆ ಅವಕಾಶ ಇರಬಾರದು.
- ನರೆಗಾಯೋಜನೆಯಲ್ಲಿ ಕಾಮಗಾರಿಗಳನ್ನು ನಿರ್ವಹಿಸುವಾಗ ಕೂಲಿ ಮತ್ತು ಸಾಮಗ್ರಿ ಕುರಿತು ಈಗಿರುವ ಪ್ರಮಾಣ 60:40ರ ಬದಲಿಗೆ 70:30 ಆಗಬೇಕು.
- ಹಿಂದಿನ ಹಣಕಾಸು ಆಯೋಗಗಳು ತ್ರಿಸ್ತರ ಪಂಚಾಯತ್‌ಗಳಿಗೆ ಹೆಚ್ಚಿನ ಒತ್ತುಕೊಟ್ಟಿದ್ದು, ಅದರಂತೆ ಮುಂದಿನ ಹಣಕಾಸು ಆಯೋಗವೂ ಕೂಡ ತ್ರಿಸ್ತರ ಪಂಚಾಯತ್‌ಗಳಿಗೆ ಹೆಚ್ಚಿನ ಒತ್ತು ನೀಡಬೇಕು. ಇದರ ಅನುದಾನಗಳಿಗೆ ರಾಜ್ಯಗಳು ಯಾವುದೇ ನಿರ್ಬಂಧ ಹೇರದೆ ಮುಕ್ತ ಅನುದಾನವಾಗಿಯೇ ನೇರವಾಗಿ ತ್ರಿಸ್ತರ ಪಂಚಾಯತ್‌ಗಳಿಗೆ ವರ್ಗಾವಣೆಯಾಗಬೇಕು.
- ಕೇಂದ್ರಿಯ ವಿಪತ್ತು ನಿರ್ವಹಣಾ ನಿಧಿ ಬಳಕೆಯ ಮಾರ್ಗದರ್ಶಿ ಸೂತ್ರಗಳು ರಾಷ್ಟ್ರ ಮಟ್ಟಕ್ಕೆ ಮಾಡಿದ್ದು ಅದನ್ನು ಆಯಾ ರಾಜ್ಯಗಳಿಗೆ ಅನುಗುಣವಾಗಿ ಬದಲಾಯಿಸಿಕೊಳ್ಳಲು ಅವಕಾಶವನ್ನು ನೀಡಬೇಕು.
- ವಸತಿ ಯೋಜನೆಗೆ ಸಂಬಂಧಿಸಿದಂತೆ ಒಮ್ಮೆ ನಿರ್ಮಿಸಿದ ಮನೆಗಳಿಗೆ 15 ವರ್ಷಗಳ ನಂತರ ಅದರ ದುರಸ್ತಿಯ ವೆಚ್ಚವು ರೂ.1.5 ಲಕ್ಷದಿಂದ 2 ಲಕ್ಷಗಳಿದೆ. ಆದರೆ ಪ್ರಸ್ತುತ ಸಾಮಾನುಗಳ ಬೆಲೆಗಳು ಏರಿಕೆಯಾಗಿದ್ದು ಈ ವೆಚ್ಚವನ್ನು 3 ರಿಂದ 3.5 ಲಕ್ಷದವರೆಗೆ ಹೆಚ್ಚಳ ಮಾಡಬೇಕು.
- ಪ್ರಸ್ತುತ ಜೀವನ ನಿರ್ವಹಣೆಯ ವೆಚ್ಚ ಹೆಚ್ಚಾಗಿರುವುದರಿಂದ ನರೇಗಾ ಕಾರ್ಯಕ್ರಮದಲ್ಲಿ 200 ದಿನಗಳ ಕೆಲಸ ನೀಡಬೇಕು ಮತ್ತು ಕನಿಷ್ಠ 600ರೂ.ಗಳ ದಿನಗೂಲಿಯನ್ನು ನಿಗದಿ ಮಾಡಬೇಕು.
- ನರೇಗಾ ಕಾರ್ಯಕ್ರಮದಲ್ಲಿ ಕೆಲಸಗಾರರಿಗೆ ನೀಡುವ ಪ್ರಯಾಣದ ವೆಚ್ಚವು ದೂರದ ಆಧಾರದಲ್ಲಿ ನಿಗದಿಯಾಗುವುದಿಲ್ಲ. 5 ಕಿ.ಮೀ ಪ್ರಯಾಣಿಸುವವರಿಗೂ ಹಾಗೂ 15 ಕಿ.ಮೀ. ದೂರ ಪ್ರಯಾಣಿಸುವವರಿಗೂ ಒಂದೇ ರೀತಿಯಾಗಿದೆ. ಇದನ್ನು ಕಿ.ಮೀ.ಗೆ ಅನುಗುಣವಾಗಿ ನೀಡಬೇಕು.
- ಪಂಚಾಯತ್ ವ್ಯಾಪ್ತಿಯಲ್ಲಿ ಜಾತಿ, ಮತ, ನಂಬಿಕೆ, ಲಿಂಗ, ಸ್ಥರ, ಭಾಷೆ ಮುಂತಾದವುಗಳ ನಡುವೆ ತಾರತಮ್ಯ ನಿವಾರಿಸುವ ಮತ್ತು ಸಾಮರಸ್ಯ ಸಾಧಿಸುವ ಹೊಣೆ ಪಂಚಾಯಿತಿಯದ್ದಾಗಿರಬೇಕು.
- ಗ್ರಾಮ ಪಂಚಾಯಿತಿ ಅಧ್ಯಕ್ಷರನ್ನು ಪಂಚಾಯಿತಿಯ ಪೂರ್ಣಕಾಲಿಕ ಮುಖ್ಯ ಕಾರ್ಯನಿರ್ವಾಹಕರೆಂದು ಪರಿಗಣಿಸಿ ಆ ಹುದ್ದೆಗೆ ಸೂಕ್ತವಾದ ವೇತನವನ್ನು ನೀಡಬೇಕು.

- ಗ್ರಾಮ ಪಂಚಾಯತ್ ಎಲ್ಲಾ ಸಿಬ್ಬಂದಿಗಳಿಗೆ ವೇತನ, ನಿರ್ದೇಶನಗಳನ್ನು ನೀಡುವ ಅಧಿಕಾರ ಸ್ಥಳೀಯ ಸರ್ಕಾರಗಳದ್ದಾಗಿರಬೇಕು ಹಾಗೂ ಅದಕ್ಕಾಗಿ ಪ್ರತ್ಯೇಕ ಅನುದಾನ ನೀಡಬೇಕು.
- ಎಲ್ಲಾ ಮತ ಕ್ಷೇತ್ರಗಳು ಏಕಸದಸ್ಯ ಮತಕ್ಷೇತ್ರಗಳಾಗಿರಬೇಕು.
- ಗ್ರಾಮ ಪಂಚಾಯತ್‌ನ ಅಧ್ಯಕ್ಷರಿಗೆ ಖಾಸಗಿ ಕಾರ್ಯದರ್ಶಿ (ಆಪ್ತ ಸಹಾಯಕರು) ನೇಮಕ ಮಾಡಿಕೊಳ್ಳುವ ಅವಕಾಶವಿರಬೇಕು.
- ಶಾಸಕರ / ಸಂಸದರ ಪ್ರದೇಶಾಭಿವೃದ್ಧಿ ನಿಧಿಯು ಗ್ರಾಮ ಸಭೆಯು ಅಂತಿಮಗೊಳಿಸಿದ ಯೋಜನೆಯ ಅನುಷ್ಠಾನಕ್ಕೆ ಬಳಕೆಯಾಗಬೇಕು ಹೊರತೂ ಯಾವುದೇ ಪ್ರತ್ಯೇಕ ಯೋಜನೆಗಳಿಗೆ ಬಳಸಬಾರದು.
- ಪಂಚಾಯತ್‌ಗಳು ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳಾಗಿ ಕಾರ್ಯನಿರ್ವಹಿಸಲು ಪೂರಕವಾಗಿ ಸಂವಿಧಾನದ 246ನೇ ವಿಧಿಯಲ್ಲಿ ಈಗಾಗಲೇ ಹೇಳಿರುವ 7ನೇ ಅನುಸೂಚಿಯಲ್ಲಿ ನಮೂದಿಸಿರುವ ಒಕ್ಕೂಟ ಪಟ್ಟಿ, ರಾಜ್ಯ ಪಟ್ಟಿ ಮತ್ತು ಸಮವರ್ತಿ ಪಟ್ಟಿಗಳೊಂದಿಗೆ IVನೇ ಪಟ್ಟಿಯಾಗಿ ಪಂಚಾಯತ್‌ರಾಜ್ ಪಟ್ಟಿಯನ್ನು ಸೇರಿಸಬೇಕು.
- ಪಂಚಾಯತ್‌ಗಳಿಗೆ ಸಂಬಂಧಿಸಿದಂತೆ ಸಂವಿಧಾನದ ಪರಿಚ್ಛೇದIXರ ಅಡಿಯಲ್ಲಿ ರಾಜ್ಯಗಳ ವಿವೇಚನೆಗೆ ಬಿಟ್ಟಿರುವ ಅಂಶಗಳನ್ನು ಪುನರ್ ವಿಮರ್ಶಿಸುವುದು ಮತ್ತು ಅದನ್ನು ಕಡ್ಡಾಯಗೊಳಿಸುವುದು. (ವಿಧಿ 243 ಎ, 243 ಜಿ, 243 ಹೆಚ್)
- ಪರಿಚ್ಛೇದIXರ ವಿಧಿ – '243ಬಿ'ಯ ಉಪಬಂಧದಲ್ಲಿ ಕಡ್ಡಾಯಗೊಳಿಸಿರುವ ತ್ರಿಸ್ತರ ಪಂಚಾಯತ್ ರಾಜ್ ವ್ಯವಸ್ಥೆಯ ಬದಲಾಗಿ ತ್ರಿಸ್ತರ ಅಥವಾ ದ್ವಿಸ್ತರ ವ್ಯವಸ್ಥೆಯನ್ನು ಹೊಂದುವ ಅಧಿಕಾರವನ್ನು ರಾಜ್ಯಗಳ ವಿವೇಚನೆಗೆ ಬಿಡಬೇಕು.